ನೀರಲ್ಲಿ ಕಾಲಿಟ್ಟು ಯಾವ ದ್ರೌಪದಿಯಾದರೂ ನಕ್ಕುಬಿಟ್ಟರೆ! ಕಮೋಡಿನ ಮೇಲೆ ಬಿದ್ದ ಬೆಳಕಿನ ಹೊಳಪಲ್ಲಿ ಮುಖವೇ ಕಾಣುವಂತಿತ್ತು. ಕಡು ವರ್ಣದ ಪರದೆಯ ಹಿಂದೆ ಶ್ವೇತ ಬಾತ್‌ಟಬ್. ಪೇರಿಸಿಟ್ಟ ಮೇಕಪ್ ಸಾಮಗ್ರಿಗಳು. ಬಿಳಿಯನ್ನು ಬಿಳಿಯೇ ನಾಚಿಸುವಂತಹ ಟವೆಲ್‌ಗಳು. ಬಗೆ ಬಗೆ ವಿನ್ಯಾಸದ ನಲ್ಲಿಗಳು. ಇದೆಲ್ಲವನ್ನೂ ದುಪ್ಪಟ್ಟಾಗಿ ಕಾಣಿಸುವ ವಿಶಾಲ ಕನ್ನಡಿ. ಅದರೊಳಗೆ ನಾನು ಎಂಬ ದೃಷ್ಟಿ ಬೊಟ್ಟು. ಇಲ್ಲ ಇದು ಮಲಿನವಾಗಬಾರದು. ಆದರೆ ಏನು ಮಾಡುವುದು? ಕಾರ್ಯಾಗಾರಕ್ಕೆಂದು ಬಂದು ವಾರದ ಮಟ್ಟಿಗೆ ಇಂಥ ಲಲಿತಮಹಲಿನಲ್ಲಿ ಇದ್ದ ನಾನೂ ಮತ್ತು ನನ್ನ ಸಹೋದ್ಯೋಗಿಗಳು ಅಲ್ಲಿ ತರಬೇತಿ ಪಡೆದೆವೋ ಇಲ್ಲಾ ಹೋಟೆಲ್ ನೋಡಿಕೊಂಡು ಬಂದೆವೋ ಗೊತ್ತಿಲ್ಲ. ಅಲ್ಲಿ ಬೆಳಗಿನ ಕಾಫಿ ಕಾಂಪ್ಲಿಮೆಂಟರಿ ಇರಲಿಲ್ಲ. ಕಾಫಿಗೆ ನೂರಾ ಮುವ್ವತ್ತು ತೆರುವ ಬದಲು ಬೆಳಗಾಗೆದ್ದು ಹೊರಗೆ ಬಂದು ಅದರ ಕಾಂಪೌಂಡಿನ ಆಚೆ ತಳ್ಳುಗಾಡಿಯ ಟೀ ಕುಡಿಯುತ್ತ ಹೋಟೆಲೆಡೆ ನೋಡುತ್ತಿದ್ದೆವು. ಏನೇ ಆದರೂ ಈ ಟೀ ಕೊಡುವ ಸುಖದ ಮುಂದೆ ಆ ಥಳುಕು ಬಳುಕು ಏನೂ ಅಲ್ಲ ಕಣ್ರಯ್ಯ ಎಂದು ಎಲ್ಲರೂ ಒಂದೊಂದು ಸಲ ಅವಕಾಶ ನೋಡಿ ಹೇಳಿಕೊಂಡು ಮುಂದಿನವಾರದ ನಮ್ಮ ಬಡತನಕ್ಕೆ ಮೊದಲೇ ಮುನ್ನುಡಿ ಬರೆದುಕೊಳ್ಳುತ್ತಿದ್ದೆವು. ಅಲ್ಲಿದ್ದಾಗ 'ಉಲಮ್‌ನ ದ್ವಂದ್ವ' ಇಲ್ಲಿದ್ದಾಗ 'ನರಿ ದ್ರಾಕ್ಷಿ ರಕ್ಷಣಾ ತಂತ್ರ!' ಇದು ಮಧ್ಯಮವರ್ಗದ ಮಧ್ಯಮ ಮಾರ್ಗ.

ನಾನು ಕಾಲೇಜು ಓದುವಾಗ ಎನ್.ಎಸ್.ಎಸ್ ವಿದ್ಯಾರ್ಥಿ. ವಾರಕ್ಕೊಂದು ದಿನ ಎರಡು ಗಂಟೆ ಕಾಲೇಜಲ್ಲಿ ಶ್ರಮದಾನ ಮಾಡಿದರೆ ಅರುವತ್ತು ಪೈಸೆಯ 'ಚಂದ್ರಭವನ' ಎಂಬ ಹೋಟೆಲಿನ ಕೂಪನ್ ಕೊಡುತ್ತಿದ್ದರು. ಅವೊತ್ತಿನ ರೇಟಲ್ಲಿ ಅದಕ್ಕೆ ಎರಡು ಖಾಲಿ ದೋಸೆ ಇಲ್ಲ ಒಂದು ಪ್ಲೇನ್ ದೋಸೆ ಬರುತ್ತಿತ್ತು. ಹೇಗಾದರೂ ಮಾಡಿ ಎರಡು ಚೀಟಿ ಗಿಟ್ಟಿಸಿಕೊಂಡರೆ? ಕೆಲವು ಸ್ನೇಹಿತರು ಇದನ್ನು ಅತ್ತುಕೊಂಡು, ಬೇಡಿಕೊಂಡು, ಗಿಂಜಿಕೊಂಡು ಬೈಸಿಕೊಂಡು, ಅವಮಾನಗಳನ್ನು ಹಲ್ಲಲ್ಲಿ ಕಚ್ಚಿಕೊಂಡು ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಇದನ್ನು ಹೇಳುವಾಗ ನಾಲ್ವರು ಕಾರಣ ಪುರುಷರು ನನಗೆ ನೆನಪಾಗುತ್ತಿದ್ದಾರೆ. ಇವರು ಕಡಿಮೆ ದುಡ್ಡಿನಲ್ಲಿ ಹೆಚ್ಚು ಹೊಟ್ಟೆ ತುಂಬಿಸಿಕೊಳ್ಳುವುದು ಹೇಗೆ ಎಂದು ನಾಡಿಗೆ ಹೇಳಿಕೊಟ್ಟವರು. ಒಂದೇ ಎಲೆಯಲ್ಲಿ ಊಟ ಮಾಡುವ ಮೂಲಕ ಜಾತಿ, ಗೀತಿ, ವರ್ಗ, ಗಿರ್ಗ, ಎಂಜಲು ಗಿಂಜಲುಗಳೆಂಬ ಭೇದ ಭಾವ ತೊರೆದು ಸಮಾನತೆಗೆ ವ್ಯಾಖ್ಯೆ ಬರೆದುಕೊಂಡವರು. ಮತ್ತು ಕರ್ನಾಟಕದ ಮುಕ್ಕಾಲುವಾಸಿ ಹೋಟೆಲುಗಳಲ್ಲಿ ಫುಲ್ ಮೀಲ್ಸ್ ಬೋರ್ಡನ್ನು ಪರ್ಮನೆಂಟಾಗಿ ತೆಗೆಸಿ ಹಾಕಿದವರು. ಇವರು 'ಭೂತಯ್ಯನ ಮಗ ಅಯ್ಯು' ಸಿನಿಮಾದಲ್ಲಿ ಬಿಳಿ ಪಂಚೆ ಹೊದ್ದುಕೊಂಡು ಜಾಗ ಬದಲಾಯಿಸಿಕೊಳ್ಳುತ್ತ ಕೇವಲ ಒಂದೇ ಎಲೆಯಲ್ಲಿ ಒಂದೇ ಒಂದು ಊಟ ಮೆದ್ದವರು. ಈಗ ಹಸಿವೆಯ ಪಿತೃದೇವತೆಗಳಂತೆ, ಗ್ರಾಹಕರ ಮ್ಯಾನೇಜ್‌ಮೆಂಟ್‌ನ ಗುರುಗಳಂತೆ ಮೇಲೆ ಇದ್ದಾರೆ. ಹೋಟೆಲಿನ ಒಳಗೆ ಹೋಗುವ ಬಡವರಿಗೆ ಇವರು ಅಂತರಿಕ್ಷದಿಂದಲೇ ಆಶೀರ್ವಾದ ಮಾಡುತ್ತಿರುತ್ತಾರಂತೆ. ಎನ್.ಎಸ್.ಎಸ್ ಕೂಪನ್ ಪಡೆದ, ಇಂಥ ಪರಂಪರೆಯ ನಾವು ಮಾಡುತ್ತಿದ್ದುದು ಇವತ್ತು ಒಂದು, ನಾಳೆ ಇನ್ನೊಂದು ದೋಸೆ ತಿನ್ನುವುದಾಗಿ ಹೋಟೆಲಿನವರನ್ನು ಬೇಡಿ ಪರ್ಮಿಶನ್ ತೆಗೆದುಕೊಳ್ಳುವುದು. ಕಾರಣವಿಷ್ಟೇ ಒಂದು ದೋಸೆಗೆ ಎರಡು ಸಲ ಚಟ್ನಿ ಹಾಕಿಸಿಕೊಂಡರೆ ಮರುದಿನದ ದೋಸೆಗೆ ಚಟ್ನಿ ಬೋನಸ್ ಇದ್ದ ಹಾಗೆ. ಎರಡು ದೋಸೆ ಎರಡು ದಿನ ಆದರೆ ನಾಲ್ಕು ಚಟ್ನಿ! ನನಗೊಂದು ಅನುಮಾನ ನಮ್ಮ ಕಾಲದ ವಿದ್ಯಾರ್ಥಿಗಳನ್ನು ಸಲಹಿದ್ದು ದೋಸೆಯೋ ಚಟ್ನಿಯೋ ಎಂದು.